ಓ ಎಸ್ಃ 361/2019

ಡಿ ಡಬ್ಲ್ಯೂ ಃ 2

ದಿನಾಂಕಃ 18.09.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ ಸಿ ಎಸ್ ಆರ್ ವಕೀಲರಿಂದಃ**

ನಾನು ಹುಟ್ಟಿದ ದಿನದಿಂದ ನಾನು ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಹೇಳಿದ ಊರಿನಲ್ಲಿ ವಾಸವಿದ್ದೇನೆ. ಈ ದಾವೆ ಯಾವ ಕಾರಣಕ್ಕೆ ಹೂಡಲಾಗಿರುತ್ತದೆ ಎಂಬ ವಿಷಯವನ್ನು ನನಗೆ ಯಾರು ಮೊದಲಿಗೆ ತಿಳಿಸಿರುತ್ತಾರೆ ಎಂದರೆ ಸಾಕ್ಷಿ ಜುಬೀದಾ ಬಿ ರವರು ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ಜುಬೇಬಾಬೀ ರವರಿಗೂ ಮತ್ತು ನಮ್ಮ ಕುಟುಂಬಕ್ಕೂ ಸ್ನೇಹ ಮತ್ತು ಪರಿಚಯ ಇರುತ್ತದೆ. ಜುಬೇದಾಬೀ ರವರ ಗಂಡನ ಹೆಸರು ಅಮೀರ್ ಖಾನ್ ಎಂದರೆ ಸರಿ. ಸದರಿ ಅಮೀರ್ ಖಾನ್ ರವರು ಭಾಗ ಆಗುವ ಮುಂಚೆ ತೀರಿಕೊಂಡಿರುತ್ತಾರೆ.

ನಾನು ವಾದಿ ಮತ್ತು ಪ್ರತಿವಾದಿಗಳು ದಿನಾಂಕಃ 10.03.1990 ರಲ್ಲಿ ಮಾಡಿಕೊಂಡಿರುವ ಪಂಚಾಯಿತ್ ಪಾರಿಕತ್ ನಲ್ಲಿ ನಾನು ಸಾಕ್ಷಿಯಾಗಿರುತ್ತೇನೆ ಎಂದು ಹೇಳಿರುವ ವಿಚಾರ ಸತ್ಯವಾಗಿರುತ್ತದೆ. ನಾನು ಪಂಚಾಯಿತ್ ಪಾರಿಕತ್ ನ್ನು ನೋಡಿರುತ್ತೇನೆ. ಅದರಲ್ಲಿ 5 ಆಸ್ತಿಗಳು ಇರುತ್ತವೆ. ಅವುಗಳಲ್ಲಿ ಸ.ನಂ. 170/2 , ಸ.ನಂ. 172/2, ಸ.ನಂ. 172/14ಎ , ಸ.ನಂ. 169/3 ಎ ಮತ್ತು ಸ.ನಂ. 169/3 ಬಿ ಇರುತ್ತದೆ.

ಸ.ನಂ. 170/2 ರಲ್ಲಿ 2 ಎಕರೆ 30 ಗುಂಟೆ ಇರಬಹುದು. ಸ.ನಂ. 172/2 ರಲ್ಲಿ 2 ಎಕರೆ 10 ಗುಂಟೆ ಇರುತ್ತದೆ. ಸ.ನಂ. 169/3 ಎ ನಲ್ಲಿ 14 ಗುಂಟೆ ಮತ್ತು ಸ.ನಂ. 169/3 ಬಿ ನಲ್ಲಿ 9 ಗುಂಟೆ ಇರುತ್ತದೆ. ಸದರಿ ಸ.ನಂ. ಗಳಲಿ ಯಾರು ಯಾರಿಗೆ ಎಷ್ಟು ಭಾಗ ಹೋಗಿರುತ್ತದೆ ಎಂದು ನನಗೆ ಸರಿಯಾಗಿ ಗೊತ್ತಿಲ್ಲ.

ಇಬ್ರಾಹಿಂ ಸಾಬ್ ರವರು ನನಗೆ ಪರಿಚಯ ಇರುತ್ತಾರೆ. ದಿನಾಂಕಃ 10.03.1990 ರ ಪಂಚಾಯಿತ್ ಪಾರಿಕತ್ ನಲ್ಲಿ ಸಹಿ ಮಾಡಿರುವುದಿಲ್ಲ, ಅದಕ್ಕೆ ಕಾರಣ ಅವರು ತೀರಿಕೊಂಡಿರುತ್ತಾರೆ.ನಾನು ಯಾವುದೇ ಪಂಚಾಯಿತ್ ಪಾರಿಕತ್ ಆಗದೇ ಇದ್ದರೂ ಪ್ರತಿವಾದಿಗಳಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಪಂಚಾಯಿತ್ ಪಾರಿಕತ್ ನ್ನು ನಾನು ನೋಡಿರುತ್ತೇನೆ. ಈ ದಾವೆ,ಪ್ರತಿವಾದಿಗಳಿಗೂ ಮತ್ತು ನನಗೂ ಯಾವುದೇ ಸಂಬಂದ ಇಲ್ಲದೇ ಇದ್ದರೂ ನಾನು ಪ್ರತಿವಾದಿಗಳಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು, ಮಾಗಡಿ